# ಮಕ್ಕಳ ಮೇಲೆ
# ಸುಸಂಸ್ಕಾರಗಳನ್ನು ಹೇಗೆ ಮಾಡಬೇಕು ?

## ಪ್ರಸ್ತಾವನೆ

ಸಂಸ್ಕಾರಗಳೆಂದರೆ ಗುಣಗಳ ಗುಣಾಕಾರ ಮತ್ತು ದೋಷಗಳ ಭಾಗಾಕಾರ. ಸಂಸ್ಕಾರಗಳನ್ನು ಮಾಡುವುದೆಂದರೆ ಮಕ್ಕಳಲ್ಲಿ ಒಳ್ಳೆಯ ಅಭ್ಯಾಸಗಳನ್ನು ಮೈಗೂಡಿಸುವುದು ಮತ್ತು ಕೆಟ್ಟ ಅಭ್ಯಾಸಗಳನ್ನು ತೆಗೆದುಹಾಕುವುದು. ಮಕ್ಕಳ ಮೇಲೆ ಉತ್ತಮ ಸಂಸ್ಕಾರಗಳನ್ನು ಮಾಡುವುದೆಂದರೆ, ಅವರಿಗೆ ತಂದೆ-ತಾಯಿಯರಿಗೆ ಪ್ರತಿದಿನ ನಮಸ್ಕಾರ ಮಾಡು, ಇತರರ ನಿಂದನೆಯನ್ನು ಮಾಡಬೇಡ ಇತ್ಯಾದಿಗಳನ್ನು ಕಲಿಸುವುದು; ಆದರೆ ಅವುಗಳನ್ನು ಹೇಗೆ ಕಲಿಸುವುದು ? ಭಾಷಣ ಬಿಗಿದು ಕಲಿಸುವುದಲ್ಲ, ಕತೆಗಳನ್ನು ಹೇಳಿ ಕಲಿಸುವುದಲ್ಲ ಅಥವಾ ಚಾಕೋಲೇಟ್, ಐಸ್‌ಕ್ರೀಮ್ ಮುಂತಾದವುಗಳ ಆಮಿಷ ತೋರಿಸಿ ಕಲಿಸುವುದಲ್ಲ; ಅವುಗಳನ್ನು ತಮ್ಮ ಕೃತಿಗಳಿಂದ ಕಲಿಸಬೇಕು ! ಎಂಟು ವರ್ಷದ ಮಗನಿಗೆ ಪ್ರತಿದಿನ ಹಿರಿಯರಿಗೆ ನಮಸ್ಕಾರ ಮಾಡಲು ಆಜ್ಞೆ ಮಾಡಿದರೆ, ಅವನು ನಾಲ್ಕು ದಿನ ಮಾಡುವನು ಮತ್ತು ಐದನೇ ದಿನ ನಾನು ಮಾಡುವುದಿಲ್ಲ ಎಂದು ಹೇಳುವನು. ಅವನಿಗೆ ನಮಸ್ಕಾರ ಮಾಡುವ ಲಾಭಗಳ ಬಗ್ಗೆ ಹೇಳಿದರೂ, ಉಪಯೋಗವಾಗುವುದಿಲ್ಲ. ನಿಮಗೆ, ನಿಮ್ಮ ಮಗನು ಹಿರಿಯರಿಗೆ ನಮಸ್ಕಾರ ಮಾಡಬೇಕು ಎಂದೆನಿಸುತ್ತಿದ್ದರೆ, ಅದಕ್ಕೆ ಒಂದೇ ಉಪಾಯವಿದೆ, ಇಂದಿನಿಂದ ನೀವು ಮನೆಯಲ್ಲಿನ ಎಲ್ಲ ಹಿರಿಯರಿಗೆ ಪ್ರತಿದಿನ ಕೇವಲ ಒಂದು ಬಾರಿ ನಮಸ್ಕಾರ ಮಾಡಿ. ಮಗನಿಗೆ ಒಮ್ಮೆಯೂ ನಮಸ್ಕಾರ ಮಾಡಲು ಹೇಳಬೇಡಿ. ನಾಲ್ಕು ದಿನಗಳಲ್ಲಿಯೇ ನಿಮ್ಮ ಮಗ ನಿಮ್ಮ ಹಿಂದಿನಿಂದ ಬಂದು ಮನೆಯಲ್ಲಿನ ಎಲ್ಲ ಹಿರಿಯರಿಗೆ ನಮಸ್ಕಾರ ಮಾಡುವನು. ಅವನಿಗೆ ನನ್ನ ಅಪ್ಪ-ಅಮ್ಮ ಪ್ರತಿದಿನ ಅಜ್ಜ-ಅಜ್ಜಿಯರಿಗೆ ನಮಸ್ಕಾರ ಮಾಡುತ್ತಾರೆ; ಆದರೆ ನಾನು ಮಾತ್ರ ನಿರ್ಲಜ್ಜನಾಗಿ ಹಾಗೆಯೇ ನಿಂತಿರುತ್ತೇನೆ ಎಂದು ಅನಿಸುವುದು. ಮಕ್ಕಳ ಮೇಲೆ ಸಂಸ್ಕಾರಗಳನ್ನು ಮಾಡುವುದೆಂದರೆ 'ಮಾತು ನಿಲ್ಲಿಸಿ, ಕೃತಿಗಳನ್ನು ಮಾಡುವುದು' !

ಮಗನಿಗೆ ಬೈಗುಳನ್ನು ಕಲಿಸಬೇಕಾಗುವುದಿಲ್ಲ; ಆದರೆ ರಾಮನ ಜಪ ಮಾಡಲು ಅವನ ಮೇಲೆ ಸಂಸ್ಕಾರಗಳನ್ನು ಮಾಡಬೇಕಾಗುತ್ತದೆ. ಆದುದರಿಂದ ಮನೆಯಲ್ಲಿರುವವರೆಲ್ಲರೂ ದೇವರ ನಾಮಜಪ ಮಾಡುವುದು ಮಹತ್ವದ್ದಾಗಿದೆ.

ಮಕ್ಕಳ ವಯಸ್ಸು ಎಷ್ಟು ಕಡಿಮೆ ಇರುತ್ತದೆಯೋ, ಸಂಸ್ಕಾರಗಳನ್ನು ಮಾಡಲು ಅಷ್ಟು ಸುಲಭವಾಗುತ್ತದೆ. ಯಾರಾದರೊಬ್ಬ ಹುಡುಗನ ತಂದೆ-ತಾಯಿಯರು ಪ್ರತಿದಿನ ತಮ್ಮ ತಂದೆ-ತಾಯಿಯರಿಗೆ ನಮಸ್ಕರಿಸುತ್ತಿದ್ದರೆ, ೨ ವರ್ಷದ ಮಗನಿಗೆ ನಮಸ್ಕಾರ ಮಾಡುವುದು ಒಂದು ಸ್ವಭಾವವೇ ಆಗಿ ಹೋಗುವುದು. ಹೊರಗಿನಿಂದ ಯಾರಾದರೂ ಹಿರಿಯ ವ್ಯಕ್ತಿಗಳು ಬಂದರೆ ಅವನು ಓಡಿಹೋಗಿ ಅವರಿಗೆ

ನಮಸ್ಕರಿಸುವನು ಮತ್ತು ಅಭಿಮಾನದಿಂದ ಅಪ್ಪ-ಅಮ್ಮನಿಗೆ, ನೀವು ನಮಸ್ಕಾರ ಮಾಡಲು ಮರೆತಿರಿ; ನಾನು ನಮಸ್ಕಾರ ಮಾಡಿದೆ ಎಂದು ಹೇಳುವನು.

ದೊಡ್ಡವರ ಮೇಲೆ ಸಂಸ್ಕಾರಗಳನ್ನು ಮಾಡುವುದು ಕಠಿಣವಾಗಿದೆ; ಏಕೆಂದರೆ ಅವರ ಅಭಿಪ್ರಾಯಗಳನ್ನು ಬದಲಿಸುವುದು ಕಠಿಣವಾಗಿರುತ್ತದೆ. ಕೇವಲ ಅವರ ದೃಢ ಸಂಕಲ್ಪವೇ ಅವರ ದುರ್ಗುಣಗಳನ್ನು ತೆಗೆಯಬಲ್ಲದು ಅಥವಾ ಸದ್ಗುಣಗಳನ್ನು ಅಳವಡಿಸಿಕೊಳ್ಳಬಹುದು.

ಮಕ್ಕಳು ಅನುಕರಣಪ್ರಿಯರಾಗಿರುತ್ತಾರೆ. ನಿಮ್ಮ ನಡೆ-ನುಡಿ, ಮಾತು, ನಗು, ಸಿಟ್ಟು ಮುಂತಾದ ಪ್ರತಿಯೊಂದು ಕೃತಿಯನ್ನು ಮಕ್ಕಳು ತಿಳಿಯದೇ ಅನುಕರಿಸುತ್ತಿರುತ್ತಾರೆ. ಆದುದರಿಂದ ಪಾಲಕರು ತಮ್ಮ ಪ್ರತಿಯೊಂದು ಕೃತಿ, ಮಾತು, ವಿಚಾರ ಉತ್ತಮವಾಗಿವೆಯೇ, ಎಂಬುದರ ಬಗ್ಗೆ ಜಾಗರೂಕರಾಗಿರುವುದು ಆವಶ್ಯಕವಾಗಿದೆ. ಇದರ ಅರ್ಥವೇನೆಂದರೆ ನಾವು ನಮ್ಮ ಮೇಲೆ ಒಳ್ಳೆಯ ಸಂಸ್ಕಾರಗಳನ್ನು ಮಾಡಿಕೊಳ್ಳುವುದು ಮಹತ್ವದ್ದಾಗಿದೆ. ಮಕ್ಕಳ ಎದುರಿಗೆ ನಮ್ಮ ಆದರ್ಶವಿದ್ದರೆ, ಅವರ ಮೇಲೆ ಬೇರೆ ಸಂಸ್ಕಾರಗಳನ್ನು ಮಾಡುವ ಆವಶ್ಯಕತೆಯಿರುವುದಿಲ್ಲ.

ಸಂಸ್ಕಾರಗಳು ಮುಖ್ಯವಾಗಿ ಮನಸ್ಸಿನ ಮೇಲಾಗುತ್ತಿರುತ್ತವೆ. ಸಂಸ್ಕಾರಗಳಿಂದ ಮನಸ್ಸಿನ ಸಾತ್ತ್ವಿಕ ಉನ್ನತಿಯಾಗುತ್ತಿರುತ್ತದೆ ಮತ್ತು ಮನಸ್ಸಿನ ಸಾತ್ತ್ವಿಕ ಗುಣ ಹೆಚ್ಚಾಗುತ್ತದೆ. ಕೊನೆಗೆ ಮನಸ್ಸು ನಿರ್ವಿಚಾರ, ಅಂದರೆ ಶೂನ್ಯಾವಸ್ಥೆಯನ್ನು ತಲುಪುತ್ತದೆ, ಆಗ ಸಂಸ್ಕಾರಗಳನ್ನು ಮಾಡುವ ಆವಶ್ಯಕತೆಯೇ ಇರುವುದಿಲ್ಲ; ಏಕೆಂದರೆ ಯಾವುದರ ಮೇಲೆ ಸಂಸ್ಕಾರ ಮಾಡಬೇಕಾಗಿರುತ್ತದೆಯೋ, ಆ ಮನಸ್ಸೇ ಇಲ್ಲವಾಗುತ್ತದೆ ಮತ್ತು ಆ ಕ್ಷಣದಲ್ಲಿ ಜನ್ಮಜನ್ಮಾಂತರಗಳ ಸಂಸ್ಕಾರಗಳು ಇಲ್ಲವಾಗುತ್ತವೆ. ಆಗ ಅವನ ಎಲ್ಲ ವ್ಯವಹಾರಗಳನ್ನು ವಿಶ್ವಬುದ್ಧಿಯೇ ನಡೆಸುತ್ತಿರುತ್ತದೆ. ಅವನ ಎಲ್ಲ ವ್ಯವಹಾರಗಳು ತಾವಾಗಿಯೇ ಶೇ. ೧೦೦ ರಷ್ಟು ಸಂಸ್ಕಾರಯುಕ್ತವಾಗುತ್ತವೆ. – **ಲೇಖಕರು**

'ವೈಯಕ್ತಿಕ ಪ್ರೀತಿಯ ಬದಲು ರಾಷ್ಟ್ರಪ್ರೇಮ ಮತ್ತು ಧರ್ಮಪ್ರೇಮ ಮಾಡಿ ನೋಡಿ. ಅದರಲ್ಲಿ ಹೆಚ್ಚಿನ ಆನಂದವಿದೆ !' – **(ಪರಾತ್ಪರ ಗುರು) ಡಾ. ಜಯಂತ ಆಠವಲೆ**

**ಆಗಸ್ಟ್ ೨೦೨೦ ರ ವರೆಗೆ ಸನಾತನದ ೩೨೫ ಗ್ರಂಥಗಳ ಕನ್ನಡ, ಹಿಂದಿ, ಆಂಗ್ಲ, ಮರಾಠಿ, ಗುಜರಾತಿ, ತಮಿಳು, ತೆಲುಗು, ಮಲಯಾಳಂ, ಬಂಗಾಲಿ, ಒರಿಯಾ, ಪಂಜಾಬಿ, ಅಸ್ಸಾಮಿ, ನೇಪಾಳಿ, ಜರ್ಮನ್, ಸರ್ಬಿಯನ್, ಫ್ರೆಂಚ್ ಮತ್ತು ಸ್ಪ್ಯಾನಿಶ್ ಈ ೧೭ ಭಾಷೆಗಳಲ್ಲಿ ೮೦,೧೮,೦೦೦ ಪ್ರತಿಗಳು !**

## ಅನುಕ್ರಮಣಿಕೆ


**ಅಧ್ಯಾಯ ೧ : ಸಂಸ್ಕಾರ** ೧೪

೧. ಸಂಸ್ಕಾರವೆಂದರೇನು ? ೧೪

೨. ತೆಗೆದುಕೊಳ್ಳುವುದಕ್ಕಿಂತ ಕೊಡುವುದು ಮಹತ್ವದ್ದಾಗಿದೆ ೧೫

೩. ದೊಡ್ಡವರಿಗೆ ನಮಸ್ಕಾರ ಮಾಡುವುದು ೧೬

೪. ಅಹಂಕಾರ ದುಃಖದ ಮೂಲ ಕಾರಣ ೧೬

೫. ನಾಮಜಪದ ಸಂಸ್ಕಾರ ೧೭

೬. ಇತರರಿಗೆ ಸಹಾಯ ಮಾಡುವುದು ೨೨

೭. ಕತೆಗಳನ್ನು ಹೇಳುವುದು ೨೪

೮. ಸಂಸ್ಕಾರ ಸಂಕಲ್ಪ ೨೫

೯. ನಮ್ಮ ಆದರ್ಶವನ್ನೇ ಮಕ್ಕಳೆದುರಿಗೆ ಇಡಬೇಕು ೨೭

**ಅಧ್ಯಾಯ ೨ : ಸುಪ್ರಜಾಜನನ** ೨೯

೧. ಸುಪ್ರಜಾಜನನ ಎಂದರೇನು ? ೨೯

೨. ಉತ್ತಮ ಸಂತತಿಯಾಗಲು ಪ್ರಯತ್ನವನ್ನು ಯಾವಾಗ ಪ್ರಾರಂಭಿಸಬೇಕು ? ೨೯

೩. ಜೀವನಸಂಗಾತಿಯನ್ನು ಹೇಗೆ ಆರಿಸಬೇಕು ? ೩೦

೪. ಪ್್ರೇಮವಿವಾಹ ಮಾಡಿಕೊಳ್ಳುವಾಗ ಯಾವ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು ? ೩೧

೫. ಭಾವೀ ತಂದೆ-ತಾಯಿಯರು ತಮ್ಮ ಪ್ರಕೃತಿಯ ಬಗ್ಗೆ ಯಾವ ಕಾಳಜಿ ವಹಿಸಬೇಕು? ೩೨

**ಅಧ್ಯಾಯ ೩ : ಜನನಪೂರ್ವ ಸಂಸ್ಕಾರ** ೩೩

೧. ಹದಿನಾರು ಸಂಸ್ಕಾರಗಳು ಯಾವುವು ? ೩೩

೨. ಗರ್ಭಾಧಾನ ಸಂಸ್ಕಾರವನ್ನು ಏಕೆ ಮತ್ತು ಯಾವಾಗ ಮಾಡಬೇಕು ? ೩೪

೩. ನಾವು ಗರ್ಭಕ್ಕೆ ಕಲಿಸಬಹುದೇ ? ಅದರ ಮೇಲೆ ಒಳ್ಳೆಯ ಸಂಸ್ಕಾರಗಳನ್ನು ಮಾಡಬಹುದೇ ? ೩೭

೪. ಗರ್ಭವತಿ ಸ್ತ್ರೀಯ ಆಹಾರ, ವಿಹಾರ, ವಾಚನ ಮತ್ತು ಸಾಧನೆ ೩೮

೫. ತಮ್ಮ ಇಚ್ಛೆಯಂತೆ ಗುಣವಂತ ಮಕ್ಕಳಾಗಲು ಗಂಡ-ಹೆಂಡತಿ ಏನು ಮಾಡಬೇಕು ? ೪೧

೬. ಗರ್ಭಿಣಿ ಸ್ತ್ರೀಯ ಪತಿಯ ಕರ್ತವ್ಯಗಳು ಯಾವುವು ? ೪೨
೭. ಪುಂಸವನ ಸಂಸ್ಕಾರವನ್ನು ಏಕೆ ಮಾಡುತ್ತಾರೆ ? ೪೩
೮. ಅನವಲೋಭನ ಸಂಸ್ಕಾರದ ಉದ್ದೇಶಗಳು ಯಾವುವು ? ೪೪
೯. ಸೀಮಂತೋನ್ನಯನ ಸಂಸ್ಕಾರವನ್ನು ಯಾವಾಗ ಮತ್ತು ಏಕೆ ಮಾಡುತ್ತಾರೆ ? ೪೫

**ಅಧ್ಯಾಯ ೪ : ಮೊದಲನೇ ವರ್ಷದಲ್ಲಿ ಮಾಡಬೇಕಾದ ಸಂಸ್ಕಾರ ೪೬**

೧. ಜಾತಕರ್ಮ ಸಂಸ್ಕಾರವನ್ನು ಯಾರು, ಯಾವಾಗ ಮತ್ತು ಏತಕ್ಕಾಗಿ ಮಾಡಬೇಕು ? ೪೬
೨. ಜನ್ಮದಾಪೂಜೆ ಮತ್ತು ಷಷ್ಠಿಪೂಜೆಯನ್ನು ಏಕೆ ಮಾಡುತ್ತಾರೆ ? ೪೯
೩. ನಾಮಕರಣ ಸಂಸ್ಕಾರವನ್ನು ಯಾವಾಗ ಮತ್ತು ಏತಕ್ಕಾಗಿ ಮಾಡುತ್ತಾರೆ ? ೪೯
೪. ಸೂರ್ಯಾವಲೋಕನ ಸಂಸ್ಕಾರವನ್ನು ಏಕೆ ಮಾಡುತ್ತಾರೆ ? ೫೧
೫. ನಿಷ್ಕ್ರಮಣ ಸಂಸ್ಕಾರವೆಂದರೇನು ? ೫೧
೬. ಅನ್ನಪ್ರಾಶನ ಸಂಸ್ಕಾರವನ್ನು ಮಾಡುವುದರ ಉದ್ದೇಶವೇನು ? ೫೨
೭. ವರ್ಧಾಪನವಿಧಿ (ಹುಟ್ಟುಹಬ್ಬ) ೫೩
೮. ಆಟದ ಸಾಮಾನುಗಳು : ಮಕ್ಕಳ ವಿಕಾಸದಲ್ಲಿ ಆಡುವುದಕ್ಕೆ ಯಾವ ಸ್ಥಾನವಿದೆ ? ೫೪
೯. ಮಕ್ಕಳಿಗೆ ಎಂತಹ ಆಟದ ಸಾಮಾನುಗಳನ್ನು ಕೊಡಬೇಕು ? ೫೫
೧೦. ಚೂಡಾಕರ್ಮ ಸಂಸ್ಕಾರವನ್ನು ಮಾಡುವುದರ ಉದ್ದೇಶವೇನು ? ೫೫

**ಅಧ್ಯಾಯ ೫ : ವಿದ್ಯಾರಂಭ, ಶಿಸ್ತು ಮತ್ತು ಮನೋರಂಜನೆ ೫೭**

೧. ವಿದ್ಯೆಯನ್ನು ಕಲಿಯಲು ಯಾವಾಗ ಪ್ರಾರಂಭಿಸಬೇಕು ? ೫೭
೨. ಮಗನಿಗೆ ಶಿಸ್ತನ್ನು ಹೇಗೆ ಕಲಿಸಬೇಕು ? ೫೭
೩. ಶಿಸ್ತು ಕಲಿಸಲು ಮಹತ್ವದ ಸೂಚನೆಗಳು ೫೯
೪. ಮಗನ ಆಯುಷ್ಯದಲ್ಲಿ ಆಟ ಮತ್ತು ಮನೋರಂಜನೆಗೆ ಯಾವ ಸ್ಥಾನವಿದೆ ? ೬೦
೫. ದೂರದರ್ಶನದಿಂದ ಮಕ್ಕಳ ಮೇಲೆ ಯಾವ ಪರಿಣಾಮವಾಗುತ್ತದೆ ? ೬೧
೬. ಮಕ್ಕಳ ವಿಕಾಸದಲ್ಲಿ ಹವ್ಯಾಸಗಳ ಸ್ಥಾನ ಮತ್ತು ಮಹತ್ವವೇನು ? ೬೪
೭. ಸಂಗಡಿಗರು, ಅಂದರೆ ಮಿತ್ರರ ಪರಿಣಾಮ ಮಕ್ಕಳ ಮೇಲೆ ಹೇಗೆ ಆಗುತ್ತದೆ ? ೬೫

೮. ಅಕ್ಕಪಕ್ಕದ ಮನೆಯವರಿಂದ ಮಕ್ಕಳ ವ್ಯಕ್ತಿತ್ವದ ಮೇಲೆ ಹೇಗೆ
ಪರಿಣಾಮವಾಗುತ್ತದೆ ? ೬೬

**ಅಧ್ಯಾಯ ೬ : ಉಪನಯನ ಮತ್ತು ಶಿಕ್ಷಣ ೬೮**

೧. ಉಪನಯನ ಸಂಸ್ಕಾರ ಅಂದರೆ ಮುಂಜಿಯ ಮಹತ್ವವೇನು ? ೬೮

೨. ಮೇಧಾಜನನ ೭೫

೩. ಸಂಧ್ಯಾವಂದನೆ ೭೬

೪. ಪ್ರಾಣಾಯಾಮ ೭೯

೫. ಮನಸ್ಸಿನ ಏಕಾಗ್ರತೆ ಹೆಚ್ಚಾಗಲು ಧ್ಯಾನ ೮೦

೬. ಶಿಕ್ಷಣದ ಧ್ಯೇಯ ಮತ್ತು ಉದ್ದೇಶ ಯಾವುದು ? ೮೦

೭. ಮಕ್ಕಳ ಮನಸ್ಸಿನಲ್ಲಿನ ಪರೀಕ್ಷೆಯ ಭಯವನ್ನು
ಹೇಗೆ ಹೋಗಲಾಡಿಸಬೇಕು ? ೮೧

**ಅಧ್ಯಾಯ ೭ : ಕಥೆಗಳ ಮೂಲಕ ಸಂಸ್ಕಾರ ೮೫**

೧. ಕಥೆಗಳನ್ನು ಹೇಳುವುದರ ಮಹತ್ವ ೨. ಕಥೆಗಳ ವಿಧಗಳು ೮೫

೩. ಭಗವಂತನ ಲೀಲೆಗಳು ಅತ್ಯಂತ ಮಧುರವಾಗಿರುವುದರಿಂದ
‘ಹರಿಕಥೆ’ಗಳೇ ನಿಜವಾದ ಕಥೆಗಳು ! ೮೫

೪. ಮಕ್ಕಳ ಮನಸ್ಸಿನಲ್ಲಿ ಉತ್ತಮ ಸಂಸ್ಕಾರಗಳನ್ನು ಮಾಡುವಂತಹ ಅಂದರೆ
ಸಾತ್ತ್ವಿಕ ಗುಣಗಳನ್ನು ಹೆಚ್ಚಿಸಿ ದುರ್ಗುಣಗಳನ್ನು ದೂರಗೊಳಿಸುವಂತಹ
ಕಥೆಗಳನ್ನು ಮಕ್ಕಳಿಗೆ ಹೇಳಬೇಕು ! ೮೬

**ಪರಾತ್ಪರ ಗುರು ಡಾ. ಆಠವಲೆಯವರ ಆಧ್ಯಾತ್ಮಿಕ ಉತ್ತರಾಧಿಕಾರಿಗಳಾದ ಸೌ. ಬಿಂದಾ ಸಿಂಗಬಾಳ ಮತ್ತು ಸೌ. ಅಂಜಲಿ ಗಾಡಗೀಳ ಇವರ ಹೆಸರಿಗೆ ಆಧ್ಯಾತ್ಮಿಕ ಪದವಿಯನ್ನು ಸೇರಿಸಿರುವುದರ ಹಿಂದಿನ ಕಾರಣ**

ನಾಡಿಪಟ್ಟಿವಾಚನದ ಮಾಧ್ಯಮದಿಂದ ಸಪ್ತರ್ಷಿಗಳು ಸನಾತನಕ್ಕೆ ಮಾರ್ಗದರ್ಶನ ಮಾಡುತ್ತಾರೆ. ೧೩.೫.೨೦೨೦ ರಂದು ಸಪ್ತರ್ಷಿಗಳು, ‘ಇನ್ನು ಮುಂದೆ ಸದ್ಗುರು (ಸೌ.) ಬಿಂದಾ ಸಿಂಗಬಾಳರನ್ನು ‘ಶ್ರೀಸತ್‌ಶಕ್ತಿ (ಸೌ.) ಬಿಂದಾ ಸಿಂಗಬಾಳ’ ಮತ್ತು ಸದ್ಗುರು (ಸೌ.) ಅಂಜಲಿ ಗಾಡಗೀಳರನ್ನು ‘ಶ್ರೀಚಿತ್‌ಶಕ್ತಿ (ಸೌ.) ಅಂಜಲಿ ಗಾಡಗೀಳ’ ಎಂದು ಸಂಬೋಧಿಸಬೇಕು; ಏಕೆಂದರೆ ಈ ಹೆಸರುಗಳಿಂದ ಇಬ್ಬರಿಗೂ ದೇವಿತತ್ತ್ವ ಸಿಗುವುದು, ಹಾಗೆಯೇ ಆ ರೀತಿ ಉಲ್ಲೇಖಿಸುವವರಿಗೂ ಇದರ ಲಾಭವಾಗುವುದು’ ಎಂದು ಹೇಳಿದ್ದಾರೆ. ಸಪ್ತರ್ಷಿಗಳ ಆಜ್ಞೆಗನುಸಾರ ಈ ರೀತಿ ಸಂಬೋಧನೆ ಮಾಡಲಾಗುತ್ತಿದೆ.